**GOVERNMENT OF KARNATAKA**

**KARNATAKA LOKAYUKTA**

No.UPLOK-2/DE/106/2020/ARE-14

Multi Storied Building,
Dr. B.R. Ambedkar Veedhi,
Bengaluru-560001
Date: 17th October, 2022.

# RECOMMENDATION

Sub: Departmental Inquiry against Shri M.Rajanna, Municipal Commissioner (Originally Community Affairs Officer), City Municipal Council, Chamarajanagara-reg.

Ref: 1) Government Order No.ನಅಇ 83 ಡಿಎಂಕೆ 2019, Bengaluru, dated: 15/05/2020.

2) Nomination Order No.UPLOK-2/DE/106/2020, Bengaluru, dated: 27/05/2020 of Upalokayukta, State of Karnataka, Bengaluru.

3) Inquiry Report dated: 15/10/2022 of Additional Registrar of Enquiries-14, Karnataka Lokayukta, Bengaluru.

*****

The Government by its order dated: 15/05/2020 initiated the disciplinary proceedings against Shri M.Rajanna, Municipal Commissioner (Originally Community Affairs Officer), City Municipal Council, Chamarajanagara (hereinafter referred to as Delinquent Government Official, for short as DGO) and entrusted the Departmental Inquiry to this Institution.

2. This Institution by Nomination Order No.UPLOK-2/DE/106/2020, Bengaluru, dated: 27/05/2020 nominated Additional Registrar of Enquiries-14, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGO for the alleged charge of misconduct, said to have been committed by him.

3. The DGO, Shri M.Rajanna, Municipal Commissioner (Originally Community Affairs Officer), City Municipal Council, Chamarajanagara was tried for the following charges:

<u>ಅನುಬಂಧ–1</u>

<u>ದೋಷಾರೋಪಣೆ</u>

ಆ.ಸ.ನೌ. ಶ್ರೀ ಎಂ.ರಾಜಣ್ಣ, ಪೌರಾಯುಕ್ತರು (ಮೂಲತಃ ಸಮುದಾಯ ಸಂಘಟನಾಧಿಕಾರಿ) ನಗರಸಭೆ, ಚಾಮರಾಜನಗರ ಆದ ನೀವು ಚಾಮರಾಜನಗರ ನಗರಸಭೆ ವ್ಯಾಪ್ತಿಯ 17ನೇ ವಾರ್ಡಿನ ಉಪ್ಪಾರ ಬೀದಿ ಅಸೆಸ್ಮೆಂಟ್ ಸಂಖ್ಯೆ:205/190ರ ಮುನಿಸಿಪಲ್ ನಿವೇಶನದ ವಿಸ್ತೀರ್ಣ 45 x 36 ಅಡಿಗಳ ಸ್ವತ್ತಿನಲ್ಲಿ ಖಾಸಗಿ ವ್ಯಕ್ತಿ ಮಾಡಿರುವ ಒತ್ತುವರಿಯನ್ನು ತೆರವುಗೊಳಿಸದೇ, ಸರ್ಕಾರಿ ಆಸ್ತಿಯಲ್ಲಿ ಕೊಳಚೆ ನಿರ್ಮಾಣವಾಗಿದ್ದು, ಮಾಲಿನ್ಯವನ್ನು ತಡೆಗಟ್ಟಲು ವಿಫಲರಾಗಿ ನಿಯಮಗಳನ್ನು ಉಲ್ಲಂಘಿಸಿ, ನಿಮ್ಮ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ಕರ್ತವ್ಯ ನಿಷ್ಠೆಯನ್ನು ಪಾಲಿಸದೇ ಮತ್ತು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು, ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 19664 ನಿಯಮಗಳು 3(1) (i) ರಿಂದ (iii) ರಡಿಯಲ್ಲಿ ಉಕ್ತವಾದ ದುರ್ನಡತೆ ಎಸಗಿದ್ದೀರಿ ಎಂದು ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡಲಾಗಿದೆ.

4. The Inquiry Officer (Additional Registrar of Enquiries-14) on proper appreciation of oral and documentary evidence has held that, the Disciplinary Authority has 'Partly Proved' the charges leveled against DGO, Shri M.Rajanna, Municipal Commissioner

(Originally Community Affairs Officer), City Municipal Council, Chamarajanagara.

5. On perusal of the Inquiry Report, in order to prove the guilt of the DGO, the Disciplinary Authority has examined one witness i.e., PW-1 and Ex. P-1 to P-7 documents were got marked. DGO has examined himself as DW-1 and Ex. D-1 to D-11 documents were got marked.

6. On re-consideration of Inquiry Report and taking note of the totality of the circumstances of the case, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of the Inquiry Officer.

7. As per the information furnished by the Inquiry Officer, DGO, Shri M.Rajanna will retire from service on 31/07/2028.

8. Having regard to the nature of charge 'Partly Proved' against DGO, Shri M.Rajanna, Municipal Commissioner (Originally Community Affairs Officer), City Municipal Council, Chamarajanagara and on consideration of the totality of circumstances:-

"It is hereby recommended to the Government to impose penalty of withholding two annual increments payable to DGO, Shri M.Rajanna, Municipal Commissioner (Originally Community Affairs Officer), City Municipal Council, Chamarajanagara with cumulative effect".

9. Action taken in the matter shall be intimated to this Authority.

Connected records are enclosed herewith.

Sd/- 13/10/22

**(JUSTICE K.N.PHANEENDRA)**
UPALOKAYUKTA-2,
STATE OF KARNATAKA.

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್–2/ಡಿಇ–106/2020/ಎ.ಆರ್.ಇ–14

ಡಾ॥ ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು–560001,
ದಿನಾಂಕ: 15/10/2022.

## ವಿಚಾರಣಾ ವರದಿ

**ಉಪಸ್ಥಿತರು: ಸುದೇಶ್ ರಾಜಾರಾಮ್ ಪರದೇಶಿ,**
ಅಪರ ನಿಬಂಧಕರು ವಿಚಾರಣೆಗಳು–14,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌಕರ **ಶ್ರೀ. ಎಂ ರಾಜಣ್ಣ,** ಪೌರಾಯುಕ್ತರು (ಮೂಲತಃ ಸಮುದಾಯ ಸಂಘಟನಾಧಿಕಾರಿ) ನಗರಸಭೆ, ಚಾಮರಾಜನಗರ ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**
1. ಕಂಪ್ಲೆಂಟ್/ಉಪಲೋಕ್/ಎಂವೈಎಸ್/9126/2017/ಪಿ.ಪಿ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 05/11/2019.
2. ಸರ್ಕಾರದ ಆದೇಶ ಸಂಖ್ಯೆ: ನಅಇ 83 ಡಿಎಂಕೆ 2019, ಬೆಂಗಳೂರು, ದಿನಾಂಕ: 15/05/2020.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್–2/ಡಿಇ/106/2020, ಬೆಂಗಳೂರು ದಿನಾಂಕ: 27/05/2020.

* * * * * *

ಈ ದೂರನ್ನು, ದೂರುದಾರರಾದ **ಶ್ರೀ. ಕೃಷ್ಣ ಸ್ವಾಮಿ** ಬಿನ್ ಲೇ ಚಿಕ್ಕಣ್ಣಶೆಟ್ಟಿ, ನಂ.305/1, 17ನೇ ವಾರ್ಡ್, ಉಪ್ಪಾರ ಬೀದಿ, ಚಾಮರಾಜನಗರ ರವರು ಆಪಾದಿತ ಸರ್ಕಾರಿ ನೌಕರ **ಶ್ರೀ. ಎಂ ರಾಜಣ್ಣ,** ಪೌರಾಯುಕ್ತರು (ಮೂಲತಃ ಸಮುದಾಯ ಸಂಘಟನಾಧಿಕಾರಿ) ನಗರಸಭೆ, ಚಾಮರಾಜನಗರ ಇವರ ವಿರುದ್ಧ ಸಲ್ಲಿಸಿರುತ್ತಾರೆ, ತಮ್ಮ ದೂರಿನಲ್ಲಿ ಚಾಮರಾಜನಗರ "ಡಿ" ವಿಭಾಗದ ಉಪ್ಪಾರ ಬೀದಿ 17ನೇ ವಾರ್ಡಿನಲ್ಲಿ ಅಸೆಸ್ಮೆಂಟ್ ಸಂಖ್ಯೆ:205ರ 45 x 36 ಅಡಿಗಳ ವಿಸ್ತೀರ್ಣದ ಸರ್ಕಾರಿ ಖಾಲಿ ನಿವೇಶನ ಇರುತ್ತದೆ. ಆ.ಸ.ನೌಕರರ ಬೇಜವಾಬ್ದಾರಿ

ಆಡಳಿತದಿಂದ ಲಕ್ಷಾಂತರ ರೂಪಾಯಿಗಳ ಸರ್ಕಾರಿ ಆಸ್ತಿ ರಕ್ಷಣೆ ಮಾಡಿಸಿ ಉಳಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳದೆ ನಿರ್ಲಕ್ಷಿಸಿರುತ್ತಾರೆ. ಇದರಿಂದ ಈ ಖಾಲಿ ನಿವೇಶನವನ್ನು ಖಾಸಗಿ ವ್ಯಕ್ತಿಗಳು ಅಕ್ರಮವಾಗಿ ಒತ್ತುವರಿ ಮಾಡಿ ಮನೆಗಳನ್ನು ನಿರ್ಮಿಸಿ ವಾಸದ ಮನೆಯ ಕೊಳಚೆ ನೀರನ್ನು ಹರಿಯಲು ಬಿಟ್ಟಿರುವುದರಿಂದ ಈ ವಠಾರದಲ್ಲಿ ಕಲುಷಿತ ವಾತಾವರಣ ಉಂಟಾಗಿದ್ದು, ಸಾಂಕ್ರಾಮಿಕ ರೋಗಗಳು ಮತ್ತು ಸೊಳ್ಳೆಗಳ ಕಾಟದಿಂದ ತುಂಬಾ ಕಿರುಕುಳವಾಗಿದೆ. ಈ ಸರ್ಕಾರಿ ಆಸ್ತಿಯನ್ನು ಖಾಸಗಿ ವ್ಯಕ್ತಿಗಳಿಂದ ತೆರವುಗೊಳಿಸಿ ಕಲುಷಿತ ವಾತಾವರಣ ಉಂಟಾಗದಂತೆ ಸೂಕ್ತ ಕ್ರಮ ಕೈಗೊಳ್ಳಲು ಅರ್ಜಿ ಕೊಟ್ಟಿದ್ದರೂ ಸರ್ಕಾರಿ ಆಸ್ತಿಯನ್ನು ರಕ್ಷಣೆ ಮಾಡಿಸಲು ವಿಫಲರಾಗಿರುತ್ತಾರೆ. ಆದ್ದರಿಂದ ಸರ್ಕಾರಿ ಆಸ್ತಿಯನ್ನು ರಕ್ಷಣೆ ಮಾಡಿಸಿ ಕಲುಷಿತ ವಾತಾವರಣ ಉಂಟಾಗದಂತೆ ಕ್ರಮ ಜರುಗಿಸಲು ಆದೇಶ ನೀಡುವಂತೆ ಕೋರಿದ್ದು ಮತ್ತು ಇವರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಕೇಳಿಕೊಂಡಿರುತ್ತಾರೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2)ರಲ್ಲಿ ಕಾಣಿಸಿದಂತೆ, ದಿನಾಂಕ: 15/05/2020ರ ಆದೇಶದಂತೆ, ಮಾನ್ಯ ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ವಹಿಸಿದ್ದು, ಮಾನ್ಯ ಉಪಲೋಕಾಯುಕ್ತ ರವರು ದಿನಾಂಕ: 27/05/2020 ರಂದು ಅಪರ ನಿಬಂಧಕರು, ವಿಚಾರಣೆಗಳು-14 ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3)ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿದ್ದು ಇರುತ್ತದೆ.

3. ನಾಮನಿರ್ದೇಶನದ ಆದೇಶದಂತೆ, **ಆ.ಸ.ನೌ ರವರ ವಿರುದ್ಧ ದೋಷಾರೋಪಣೆ *(Articles of Charge)* ಅನ್ನು ಅಪರ ನಿಬಂಧಕರು, ವಿಚಾರಣೆಗಳು-14 ರವರು ರಚಿಸಿದ್ದು,** ಸದರಿ ದೋಷಾರೋಪಣೆಯ ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು

ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರಿಗೆ ದಿನಾಂಕ: 05/08/2020 ರಂದು ಕಳುಹಿಸಲಾಗಿರುತ್ತದೆ.

## ಅನುಬಂಧ–1

## ದೋಷಾರೋಪಣೆ

2. ಆ.ಸ.ನೌ. ಶ್ರೀ ಎಂ.ರಾಜಣ್ಣ, ಪೌರಾಯುಕ್ತರು (ಮೂಲತಃ ಸಮುದಾಯ ಸಂಘಟನಾಧಿಕಾರಿ) ನಗರಸಭೆ, ಚಾಮರಾಜನಗರ ಆದ ನೀವು ಚಾಮರಾಜನಗರ ನಗರಸಭೆ ವ್ಯಾಪ್ತಿಯ 17ನೇ ವಾರ್ಡಿನ ಉಪ್ಪಾರ ಬೀದಿ ಅಸೆಸ್ಮೆಂಟ್ ಸಂಖ್ಯೆ: 205/190ರ ಮುನಿಸಿಪಲ್ ನಿವೇಶನದ ವಿಸ್ತೀರ್ಣ 45 x 36 ಅಡಿಗಳ ಸ್ವತ್ತಿನಲ್ಲಿ ಖಾಸಗಿ ವ್ಯಕ್ತಿ ಮಾಡಿರುವ ಒತ್ತುವರಿಯನ್ನು ತೆರವುಗೊಳಿಸದೇ, ಸರ್ಕಾರಿ ಆಸ್ತಿಯಲ್ಲಿ ಕೊಳಚೆ ನಿರ್ಮಾಣವಾಗಿದ್ದು, ಮಾಲಿನ್ಯವನ್ನು ತಡೆಗಟ್ಟಲು ವಿಫಲರಾಗಿ ನಿಯಮಗಳನ್ನು ಉಲ್ಲಂಘಿಸಿ, ನಿಮ್ಮ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ಕರ್ತವ್ಯ ನಿಷ್ಠೆಯನ್ನು ಪಾಲಿಸದೇ ಮತ್ತು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು, ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 19664 ನಿಯಮಗಳು 3(1) (i) ರಿಂದ (iii) ರಡಿಯಲ್ಲಿ ಉಕ್ತವಾದ ದುರ್ನಡತೆ ಎಸಗಿದ್ದೀರಿ ಎಂದು ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡಲಾಗಿದೆ.

## ಅನುಬಂಧ–2

## ದೋಷಾರೋಪಣೆಯ ವಿವರ

## (ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡೆಕ್ಟ್)

8

3. **ದೂರಿನ ಸಂಕ್ಷಿಪ್ತ ವಿವರಣೆ:**

"ಚಾಮರಾಜನಗರ "ಡಿ" ವಿಭಾಗದ ಉಪ್ಪಾರ ಬೀದಿ 17ನೇ ವಾರ್ಡಿನಲ್ಲಿ ಅಸೆಸ್ಮೆಂಟ್ ಸಂಖ್ಯೆ:205ರ 45 x 36 ಅಡಿಗಳ ವಿಸ್ತೀರ್ಣದ ಸರ್ಕಾರಿ ಖಾಲಿ ನಿವೇಶನ ಇರುತ್ತದೆ. ಆ.ಸ.ನೌಕರರ ಬೇಜವಾಬ್ದಾರಿ ಆಡಳಿತದಿಂದ ಲಕ್ಷಾಂತರ ರೂಪಾಯಿಗಳ ಸರ್ಕಾರಿ ಆಸ್ತಿ ರಕ್ಷಣೆ ಮಾಡಿಸಿ ಉಳಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳದೆ ನಿರ್ಲಕ್ಷಿಸಿರುತ್ತಾರೆ. ಇದರಿಂದ ಈ ಖಾಲಿ ನಿವೇಶನವನ್ನು ಖಾಸಗಿ ವ್ಯಕ್ತಿಗಳು ಅಕ್ರಮವಾಗಿ ಒತ್ತುವರಿ ಮಾಡಿ ಮನೆಗಳನ್ನು ನಿರ್ಮಿಸಿ ವಾಸದ ಮನೆಯ ಕೊಳಚೆ ನೀರನ್ನು ಹರಿಯಲು ಬಿಟ್ಟಿರುವುದರಿಂದ ಈ ವಠಾರದಲ್ಲಿ ಕಲುಷಿತ ವಾತಾವರಣ ಉಂಟಾಗಿದ್ದು, ಸಾಂಕ್ರಾಮಿಕ ರೋಗಗಳು ಮತ್ತು ಸೊಳ್ಳೆಗಳ ಕಾಟದಿಂದ ತುಂಬಾ ಕಿರುಕುಳವಾಗಿದೆ. ಈ ಸರ್ಕಾರಿ ಆಸ್ತಿಯನ್ನು ಖಾಸಗಿ ವ್ಯಕ್ತಿಗಳಿಂದ ತೆರವುಗೊಳಿಸಿ ಕಲುಷಿತ ವಾತಾವರಣ ಉಂಟಾಗದಂತೆ ಸೂಕ್ತ ಕ್ರಮ ಕೈಗೊಳ್ಳಲು ಅರ್ಜಿ ಕೊಟ್ಟಿದ್ದರೂ ಸರ್ಕಾರಿ ಆಸ್ತಿಯನ್ನು ರಕ್ಷಣೆ ಮಾಡಿಸಲು ವಿಫಲರಾಗಿರುತ್ತಾರೆ. ಆದ್ದರಿಂದ ಸರ್ಕಾರಿ ಆಸ್ತಿಯನ್ನು ರಕ್ಷಣೆ ಮಾಡಿಸಿ ಕಲುಷಿತ ವಾತಾವರಣ ಉಂಟಾಗದಂತೆ ಕ್ರಮ ಜರುಗಿಸಲು ಆದೇಶ ನೀಡುವಂತೆ" ಕೋರಿರುತ್ತಾರೆ.

ದೂರಿನೊಂದಿಗೆ ಆಸ್ತಿ ತೆರಿಗೆ ರಿಜಿಸ್ಟರ್ ಪ್ರತಿ ಸಲ್ಲಿಸಿದ್ದು ಸದರಿ ದಾಖಲೆಯಲ್ಲಿ ಮುನಿಸಿಪಲ್ ನಿವೇಶನ ಎಂದು ನಮೂದಿಸಿರುವುದು ಕಂಡು ಬಂದಿರುತ್ತದೆ.

4. **ಎದುರುದಾರರ ಆಕ್ಷೇಪಣೆ:**

"ಚಾಮರಾಜನಗರ ನಗರಸಭೆ ವ್ಯಾಪ್ತಿಯ ಅ.ನಂ.205, ಆಸ್ತಿಯು ನಗರಸಭೆಯ ಆಸ್ತಿಯಾಗಿದ್ದು, ಸದರಿ ಆಸ್ತಿಯಲ್ಲಿ ಅಕ್ರಮವಾಗಿ ಒತ್ತುವರಿ ಮಾಡಿ, ಮನೆಯನ್ನು ಕಟ್ಟಿಕೊಂಡು ವಾಸ ಮಾಡುತ್ತಿರುವ ರಂಗಸ್ವಾಮಿ ಬಿನ್ ಲೇಟ್ ನಂಜಶೆಟ್ಟಿ ರವರನ್ನು ತೆರವುಗೊಳಿಸಲು ನೀಡಿರುವ ಮನವಿಯನ್ನು

ಆ

ಪರಿಶೀಲಿಸಲಾಗಿ, ಸದರಿ ಮೇಲ್ಕಂಡ ನಿವೇಶನದಲ್ಲಿ ರಂಗಸ್ವಾಮಿ ಬಿನ್ ಲೇಟ್ ನಂಜಶೆಟ್ಟಿ ರವರು ಮುಟ್ಟಾಳೆಷೆಡ್ಡು ನಿರ್ಮಿಸಿಕೊಂಡು ವಾಸ ಮಾಡುತ್ತಿರುವುದು ಕಂಡು ಬಂದಿದ್ದು, ಅದರಂತೆ, ಸದರಿ ನಿವೇಶನಕ್ಕೆ ಸಂಬಂಧಪಟ್ಟ ಮೂಲ ದಾಖಲಾತಿಗಳನ್ನು ಹಾಜರುಪಡಿಸುವಂತೆ ದಿ: 01/03/2017 ಹಾಗೂ ದಿ: 11/05/2017 ರಂದು ತಿಳುವಳಿಕೆ ಪತ್ರ ನೀಡಲಾಗಿದ್ದು, ಇದುವರೆಗೂ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ, ಸದರಿಯವರಿಗೆ ಅಂತಿಮ ತಿಳುವಳಿಕೆ ಪತ್ರ ನೀಡಿ, ಯಾವುದೇ ದಾಖಲೆಗಳನ್ನು ಹಾಜರುಪಡಿಸದೇ ಇದ್ದಲ್ಲಿ ಸದರಿ ನಿವೇಶನವನ್ನು ತೆರವುಗೊಳಿಸಲು ಕ್ರಮ ವಹಿಸಲಾಗುವುದು" ಎಂದು ನಮೂದಿಸಿರುತ್ತಾರೆ.

5. ತನಿಖಾ ಅವಧಿಯಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿರುತ್ತದೆ.

6. ಚಾಮರಾಜನಗರದ "ಡಿ" ವಿಭಾಗದ ಉಪ್ಪಾರಬೀದಿ 17ನೇ ವಾರ್ಡಿನಲ್ಲಿ ಅಸೆಸ್ಮೆಂಟ್ ಸಂಖ್ಯೆ:205/190ರ ನಿವೇಶನದ ವಿಸ್ತೀರ್ಣ 45 x 36 ಅಡಿಗಳಿದ್ದು 2002-03 ನೇ ಸಾಲಿನ ಆಸ್ತಿ ತೆರಿಗೆ ರಿಜಿಸ್ಟರ್ ಪ್ರತಿಯಲ್ಲಿ ಮುನಿಸಿಪಲ್ ನಿವೇಶನ ಎಂದು ನಮೂದಿರುತ್ತದೆ.

ಸದರಿ ಸರ್ಕಾರಿ ನಿವೇಶನವನ್ನು ಅಕ್ರಮವಾಗಿ ಒತ್ತುವರಿ ಮಾಡಿದ್ದು ಕ್ರಮ ಜರುಗಿಸಲು ಆ.ಸ.ನೌಕರರಿಗೆ ದೂರು ನೀಡಿದ್ದರೂ ಕ್ರಮ ಜರುಗಿಸಿಲ್ಲವೆಂದು ಸರ್ಕಾರಿ ಆಸ್ತಿ ರಕ್ಷಿಸಬೇಕೆಂದು ಕೊಳಚೆ ನೀರಿನಿಂದ ಉಂಟಾದ ಮಾಲಿನ್ಯವನ್ನು ತಡೆಯಬೇಕೆಂದು ದೂರು ಸಲ್ಲಿಸಿರುತ್ತಾರೆ.

ಫಿರ್ಯಾದುದಾರರು ದೂರು ಸಲ್ಲಿಸಿದ ನಂತರ ರಾಜಸ್ವ ನಿರೀಕ್ಷಕರು ಸ್ಥಳ ಪರಿಶೀಲಿಸಿದ್ದು ಶ್ರೀ ರಂಗಸ್ವಾಮಿ ಎನ್ನುವವರು ಸದರಿ ನಿವೇಶನದಲ್ಲಿ ಅಕ್ರಮವಾಗಿ ಗುಡಿಸಲು ಕಟ್ಟಿಕೊಂಡು ವಾಸಿಸುತ್ತದ ಬಗ್ಗೆ ವರದಿ ಸಲ್ಲಿಸಿದ ಮೇರೆಗೆ ಗುಡಿಸಲು ತೆರವುಗೊಳಿಸಲು ಸೂಚಿಸಿ ದಿ: 01/03/2017 ರಂದು ತಿಳುವಳಿಕೆ ಪತ್ರವನ್ನು ಶ್ರೀ

ರಂಗಸ್ವಾಮಿ ರವರಿಗೆ ಆ.ಸ.ನೌಕರರು ನೀಡಿರುತ್ತಾರೆ. ಸದರಿ ತಿಳುವಳಿಕೆ ಪತ್ರದಲ್ಲಿ ಆ.ಸ.ನೌಕರರ ಸಹಿ ಇರುತ್ತದೆ.

ಶ್ರೀ ರಂಗಸ್ವಾಮಿ ಇವರು ಅಕ್ರಮವಾಗಿ ಹಾಕಿಕೊಂಡಿದ್ದ ಗುಡಿಸಲನ್ನು ತೆರವುಗೊಳಿಸಿದ ಕಾರಣ ಪಂಚಾಯಿತಿ ವತಿಯಿಂದ ಪುನಃ ದಿನಾಂಕ: 11/05/2017 ರಂದು 2ನೇ ತಿಳುವಳಿಕೆ ಪತ್ರ ನೀಡಿರುವುದಾಗಿ ದಾಖಲೆ ಸಲ್ಲಿಸಿರುತ್ತಾರೆ.

ಆ.ಸ.ನೌಕರರು ದಿನಾಂಕ: 22/06/2016 ರಿಂದ ಕರ್ತವ್ಯ ನಿರ್ವಹಿಸುತ್ತಿದ್ದು ಸರ್ಕಾರಿ ಆಸ್ತಿಯನ್ನು ಸಂರಕ್ಷಿಸದೆ ಕರ್ತವ್ಯಲೋಪ ಎಸಗಿರುವುದು ಕಂಡು ಬಂದಿರುತ್ತದೆ. ಮುನಿಸಿಪಲ್ ನಿವೇಶನ ಒತ್ತುವರಿ ಮಾಡಿದ್ದನ್ನು ತೆರವುಗೊಳಿಸಲು ಮುನಿಸಿಪಲ್ ಆಸ್ತಿಯನ್ನು ರಕ್ಷಿಸಲು ಹಾಗೂ ಸರ್ಕಾರಿ ಆಸ್ತಿಯಲ್ಲಿ ಕೊಳಚೆ ನಿರ್ಮಾಣವಾಗಿದ್ದು ಮಾಲಿನ್ಯವನ್ನು ತಡೆಯಲು ಆ.ಸ.ನೌಕರರು ನಗರಸಭೆ ವತಿಯಿಂದ ಅಗತ್ಯ ಕ್ರಮ ಜರುಗಿಸಬೇಕಿದ್ದು ತೆರವುಗೊಳಿಸದೆ ಕರ್ತವ್ಯಲೋಪ ಎಸಗಿರುವುದು ತನಿಖೆಯಲ್ಲಿ ಕಂಡು ಬಂದಿರುತ್ತದೆ.

7. Karnataka Municipalities Act 1964 ಕಲಂ 81 ರ ರೀತ್ಯಾ ಮುನಿಸಿಪಲ್ ಸ್ವತ್ತುಗಳನ್ನು ಸಂರಕ್ಷಿಸುವ ಹೊಣೆಗಾರಿಕೆ ಇದ್ದರೂ ಅಗತ್ಯ ಕ್ರಮ ಜರುಗಿಸದೆ ಆ.ಸ.ನೌಕರರು ಕರ್ತವ್ಯಲೋಪ ಎಸಗಿರುವುದು ಕಂಡು ಬಂದಿರುತ್ತದೆ.

8. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮಗಳು ಶ್ರೀ ಎಂ.ರಾಜಣ್ಣ, ಪೌರಾಯುಕ್ತರು, ಸಿಟಿ ಮುನಿಸಿಪಲ್ ಕೌನ್ಸಿಲ್, ಚಾಮರಾಜನಗರ ಇವರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1) (i) ರಿಂದ (iii) ರನ್ವಯ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು

ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಆ.ಸ.ನೌಕರರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲು ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14-ಎ ರ ಅಡಿಯಲ್ಲಿ ಆ.ಸ.ನೌಕರರ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಂಡು ವರದಿ ಸಲ್ಲಿಸಲು ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಹಿಸಿ ಆದೇಶ ಮಾಡಿದ್ದು, ಉಪಲೋಕಾಯುಕ್ತರವರು ಇಲಾಖಾ ವಿಚಾರಣೆಗೆ ಅಪರ ನಿಬಂಧಕರು, ವಿಚಾರಣೆಗಳು-14 ರವರಿಗೆ ಆದೇಶಿಸಿರುತ್ತಾರೆ. ಆದ್ದರಿಂದ ನಿಮ್ಮ ಮೇಲೆ ಈ ದೋಷಾರೋಪಣೆ.

4. ಈ ಮೇಲ್ಕಂಡ ದೋಷಾರೋಪಣೆಯನ್ನು (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌರವರು ದಿನಾಂಕ: 06/04/2021 ರಂದು ಹಾಜರಾಗಿದ್ದು, ಆ.ಸ.ನೌ.ರವರ ಪ್ರಥಮ ಮೌಖಿಕ ಹೇಳಿಕೆ, ನಿಯಮ-11 ಕೆ.ಸಿ.ಎಸ್ (ಸಿಸಿಎ) ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌರವರು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಮಾಡಬಯಸಿರುತ್ತಾರೆ.

5. ಆ.ಸ.ನೌರವರು ದಾಖಲೆಗಳ ಪರಿಶೀಲನೆಗಾಗಿ ಅವಕಾಶ ಕಲ್ಪಿಸಿರುತ್ತದೆ.

6. ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌ ರವರಿಂದ ಲಿಖಿತ ಹೇಳಿಕೆಯನ್ನು ಕೇಳಲಾಗಿತ್ತು. ಆ.ಸ.ನೌ ರವರು ತಮ್ಮ ಲಿಖಿತ ಹೇಳಿಕೆಯಲ್ಲಿ ಉಪ್ಪಾರಬೀದಿ, 17ನೇ ವಾರ್ಡ್, ಚಾಮರಾಜನಗರದಲ್ಲಿರುವ ಆಸ್ತಿ ಅಸೆಸ್‌ಮೆಂಟ್ ನಂ.205/190 ವಿಸ್ತೀರ್ಣ 45x36 ಇದು ನಗರಸಭೆ ಆಸ್ತಿಯಾಗಿದ್ದು, ದೂರುದಾರರು ದೂರನ್ನು ಸಲ್ಲಿಸಿದ ತಕ್ಷಣ ತಾತ್ಕಾಲಿಕವಾಗಿ

ಗುಡಿಸಲನ್ನು ನಿರ್ಮಿಸುತ್ತಿರುವ ಖಾಸಗಿ ವ್ಯಕ್ತಿಗೆ ನೋಟಿಸು ನೀಡಿರುತ್ತಾರೆ ಅಂತಾ ಹೇಳಿರುತ್ತಾರೆ. ಅಲ್ಲದೇ ತಾವು ಕಂದಾಯ ಅಧಿಕಾರಿಯವರಿಂದ ಸ್ಥಳ ತಪಾಸಣೆಯನ್ನು ಮಾಡಿ, ಜಾಗೆಯಲ್ಲಿಯ ಅತಿಕ್ರಮವನ್ನು ತೆರವುಗೊಳಿಸಿ ಆಸ್ತಿಯ ಸ್ವಾಧೀನತೆಯನ್ನು ತೆಗೆದುಕೊಂಡಿರುತ್ತಾರೆ ಅಂತಾ ಹೇಳಿರುತ್ತಾರೆ. ಇನ್ನು ಮುಂದೆ ಸದರಿ ಆಸ್ತಿಯನ್ನು ಯಾರು ಅತಿಕ್ರಮಣವನ್ನು ಮಾಡಬಾರದೆಂದು ಸಾರ್ವಜನಿಕವಾಗಿ ತಿಳಿಸಿದ್ದು, ಒಂದು ವೇಳೆ ಅತಿಕ್ರಮಣ ಮಾಡಿದ್ದೇ ಆದರೆ ಅಂತಹ ವ್ಯಕ್ತಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸುವುದಾಗಿ ತಿಳಿಸಿರುತ್ತಾರೆ ಅಂತಾ ಹೇಳಿರುತ್ತಾರೆ.

7. ಮುಂದುವರೆದು ತಾನು ನಗರಸಭೆಯ ಪೌರಾಯುಕ್ತರಾಗಿ ದಿನಾಂಕ: 22/06/2016 ರಿಂದ 22/11/2017 ರವರೆಗೆ ನಂತರ ದಿನಾಂಕ: 02/07/2018 ರಿಂದ ಕರ್ತವ್ಯ ನಿರ್ವಹಿಸುತ್ತಿರುವುದಾಗಿ ತಿಳಿಸಿರುತ್ತಾರೆ. ಆದ್ದರಿಂದ, ತಾನು ಕರ್ತವ್ಯ ಲೋಪ ಎಸಗಿರುವುದಿಲ್ಲ ಅಂದು ಹೇಳಿರುತ್ತಾರೆ.

8. ಈ ವಿಚಾರಣೆಯಲ್ಲಿ, ಆ.ಸ.ನೌ.ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರವು ತಮ್ಮ ಪರವಾಗಿ ದೂರುದಾರರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ಮಾಡಿಸಿದ್ದು, ನಿ.ಪಿ.1 ಮತ್ತು 7 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಆ.ಸ.ನೌ ರವರು ತಮ್ಮನ್ನು ಡಿ.ಡಬ್ಲ್ಯೂ.1 ಎಂದು ಸಾಕ್ಷ್ಯವನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ತಮ್ಮ ಪರವಾಗಿ ನಿ.ಡಿ.1 ರಿಂದ ನಿ.ಡಿ.11 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ.

9. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಪರಿಶೀಲಿಸಲಾಯಿತು. ಆ.ಸ.ನೌ ರವರು ತಮ್ಮ ಲಿಖಿತ ವಾದವನ್ನು ಮಂಡಿಸಿರುತ್ತಾರೆ.

10. ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ–1 :** ವಿಚಾರಣಾ ಪ್ರಾಧಿಕಾರವು ಆ.ಸ.ನೌರವರುಗಳ ಮೇಲೆ

ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

11. ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

12. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ 1: ಭಾಗಶಃ ಸಕಾರಾತ್ಮಕವಾಗಿ.**
**ಅಂಶ 2: ಅಂತಿಮ ಆದೇಶದಂತೆ.**

## ಕಾರಣಗಳು

13. ಶಿಸ್ತು ಪ್ರಾಧಿಕಾರ ದೂರುದಾರರನ್ನು ಪಿ.ಡಬ್ಲ್ಯೂ.1 ಎಂದು ನುಡಿಸಾಕ್ಷಿ ಮಾಡಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ನಿ.ಪಿ.1 ಮತ್ತು 7 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಮೇಲೆ ಹೇಳಿರುವ ಆಸ್ತಿಯಲ್ಲಿ (ನಿವೇಶನದಲ್ಲಿ) ಒಬ್ಬ ರಂಗಸ್ವಾಮಿ ತಂದೆ ಲೇಟ್ ನಂಜಶೆಟ್ಟಿ ರವರು ಅಕ್ರಮವಾಗಿ ಸ್ಥಳವನ್ನು ಆಕ್ರಮಿಸಿಕೊಂಡು ಮಟ್ಟಾಳೆ ಗುಡಿಸಲನ್ನು ನಿರ್ಮಿಸಿಕೊಂಡಿರುತ್ತಾರೆ. ಇದನ್ನು ತೆರವುಗೊಳಿಸಿ ಈ ಸ್ಥಳವನ್ನು ಸರ್ಕಾರಕ್ಕೆ ವಹಿಸಿಕೊಳ್ಳಲು ಆ.ಸ.ನೌ ರವರಿಗೆ ದೂರನ್ನು ಸಲ್ಲಿಸಿದರೂ ಸಹಿತ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ ಅಂತಾ ನುಡಿದಿರುತ್ತಾರೆ.

14. ಆದ್ದರಿಂದ ಈ ವಿಷಯದ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ತಿಳಿಸಿದಾಗ, ಅವರು ಆ.ಸ.ನೌ ರವರಿಗೆ ಕ್ರಮ ತೆಗೆದುಕೊಳ್ಳಲು ತಿಳಿಸಿದರೂ ಸಹಿತ ಯಾವುದೇ ಕ್ರಮ ತೆಗೆದು ಕೊಂಡಿರುವುದಿಲ್ಲ ಅಂತಾ ನುಡಿದಿರುತ್ತಾರೆ.

15. ದೂರನ್ನು ನಿ.ಪಿ.1 ಎಂದು, ನಿ.ಪಿ.2 ಫಾರಂ ನಂ.1 ಮತ್ತು ನಿ.ಪಿ.3 ಫಾರಂ ನಂ.2 ಎಂದು, ಜಿಲ್ಲಾಧಿಕಾರಿಗಳಿಗೆ ಬರೆದುಕೊಂಡ ಪತ್ರವನ್ನು ನಿ.ಪಿ.4, ನಗರ ಸಭೆಯವರಿಗೆ ತಾನು ದೂರನ್ನು ಸಲ್ಲಿಸಿದ ಬಗ್ಗೆ ಕೊಟ್ಟ ಹಿಂಬರಹವನ್ನು ನಿ.ಪಿ.5 ಎಂದು, ಆಸ್ತಿಯ ತೆರಿಗೆ ರಿಜಿಸ್ಟರನ್ನು ನಿ.ಪಿ.6 ಎಂದು, ಜಿಲ್ಲಾಧಿಕಾರಿಗಳು ಆ.ಸ.ನೌ ರವರಿಗೆ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದ ಬಗ್ಗೆ ನಿ.ಪಿ.7 ಎಂದು ಗುರುತಿಸಲಾಗಿದೆ.

16. ಪಿ.ಡಬ್ಲ್ಯೂ.1 ಇವರು ತಮ್ಮ ಪಾಟೀಸವಾಲಿನಲ್ಲಿ ಆಸ್ತಿ ತೆರಿಗೆ ರಿಜಿಸ್ಟರ್‌ನ್ನು ನಿ.ಡಿ.1, ಗುಡಿಸಲು ತೆರವುಗೊಳಿಸಿದ ಬಗ್ಗೆ 3 ಛಾಯಾಚಿತ್ರಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿ.ಡಿ.2 ಎಂದು ಗುರುತಿಸಿಕೊಂಡಿರುತ್ತಾರೆ. ಈ ಛಾಯಾಚಿತ್ರಗಳ ಬಗ್ಗೆ ದೂರುದಾರರು ಒಪ್ಪಿಕೊಂಡರೂ ಸಹಿತ ಅವರು ಮುಂದುವರೆದು ತಾನು ದೂರನ್ನು ಸಲ್ಲಿಸಿದ 3 ವರ್ಷಗಳ ನಂತರ ಅಂದರೆ 2020 ರಲ್ಲಿ ತೆರವುಗೊಳಿಸಿರುತ್ತಾರೆ ಅಂತಾ ನುಡಿದಿರುತ್ತಾರೆ.

17. ಆ.ಸ.ನೌ ರವರು ತಮ್ಮನ್ನು ಡಿ.ಡಬ್ಲ್ಯೂ.1 ಎಂದು ಸಾಕ್ಷಿ ನುಡಿದಿದ್ದು, ನಿ.ಡಿ.1 ರಿಂದ 11 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಇವರು ತಮ್ಮ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತಾರೆ ಮತ್ತು ತಮ್ಮ ಲಿಖಿತ ಹೇಳಿಕೆಯಲ್ಲಿ ಹೇಳಿದ ವಿಷಯವನ್ನು ಹೇಳಿರುತ್ತಾರೆ.

18. ನಿವೇಶನ/ಅಸೆಸ್‌ಮೆಂಟ್ ನಂ.205/190 ಇದು ನಗರಸಭೆ ಆಸ್ತಿ ಇರುವ ಬಗ್ಗೆ ವಿವಾದ ಇರುವುದಿಲ್ಲ. ನಿ.ಡಿ.4 ಇದು ನಿವೇಶನ ನಂ.207/192 ಕ್ಕೆ ಸಂಬಂಧಿಸಿದ್ದು ಇದ್ದು, ತಕರಾರು ಒಳಪಟ್ಟ ಆಸ್ತಿಗೆ ಸಂಬಂಧಿಸಿದ್ದು ಇರುವುದಿಲ್ಲ. ದೂರುದಾರರ ಪ್ರಕಾರ ತಾನು ತಕರಾರು ಒಳಪಟ್ಟ ಆಸ್ತಿ ನಂ.205/190 ರಲ್ಲಿ ರಂಗಸ್ವಾಮಿಯ ಗುಡಿಸಲನ್ನು ಹಾಕಿಕೊಂಡಿದ್ದು ಅದನ್ನು ತೆರವುಗೊಳಿಸಲು ಆ.ಸ.ನೌ ರವರಿಗೆ ದೂರನ್ನು ಸಲ್ಲಿಸಿದ್ದರೂ ಸಹಿತ, 3 ವರ್ಷಗಳ ವರೆಗೆ ಯಾವುದೇ ಕ್ರಮ ತೆಗೆದುಕೊಳ್ಳದೇ ಇದ್ದಾಗ, ಈ ಸಂಸ್ಥೆಗೆ ದೂರನ್ನು ಸಲ್ಲಿಸಿದ ನಂತರ ತೆರವುಗೊಳಿಸಿರುತ್ತಾರೆ ಅಂತಾ ಹೇಳಿರುತ್ತಾರೆ.

19. ಪಿ.ಡಬ್ಲ್ಯೂ.1 ಇವರು ಜಿಲ್ಲಾಧಿಕಾರಿಗಳು, ಚಾಮರಾಜನಗರ ಇವರಿಗೆ ಬರೆದುಕೊಂಡ ಪತ್ರ ದಿನಾಂಕ: 04/05/2017 ನ್ನು ಹಾಜರುಪಡಿಸಿದ್ದು ಅದು ನಿ.ಪಿ.4 ಎಂದು ಗುರುತಿಸಲಾಗಿದೆ. ಸದರಿ ಪತ್ರದಲ್ಲಿ ಬರೆದ ವಿಷಯವನ್ನು ಪರಿಶೀಲಿಸಿದಾಗ ಪಿ.ಡಬ್ಲ್ಯೂ.1 ಇವರು ಆ.ಸ.ನೌ ರವರಿಗೆ ದಿನಾಂಕ: 28/09/2016 ರಲ್ಲಿ ಸದರಿ ಆಸ್ತಿಯನ್ನು ತೆರವುಗೊಳಿಸಲು ಕೇಳಿಕೊಂಡರೂ ಸಹ ಯಾವುದೇ ಕ್ರಮವನ್ನು ತೆಗೆದುಕೊಂಡಿವುದಿಲ್ಲ ಎಂದು ನಮೂದು ಇರುತ್ತದೆ. ದಿನಾಂಕ: 28/09/2016 ರಂದು ದೂರು ಸಲ್ಲಿಸಿದ ಬಗ್ಗೆ ನಗರಸಭೆ ಚಾಮರಾಜನಗರ ಕಾರ್ಯಾಲಯವು ದೂರನ್ನು ಸ್ವೀಕರಿಸಿದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿದ್ದು, ಅದು ನಿ.ಪಿ.5 ಎಂದು ಗುರುತಿಸಿಸಲಾಗಿದೆ. ಈ ಎರಡೂ ದಾಖಲೆಯಿಂದ ನಿ.ಪಿ.4 ಮತ್ತು 5 ಕಂಡು ಬರುವುದು ಏನೆಂದರೆ ಆ.ಸ.ನೌ ರವರು ಪೌರಾಯುಕ್ತರು ಎಂದು ಕರ್ತವ್ಯ ನಿರ್ವಹಿಸುತ್ತಿದ್ದಾಗ ದೂರನ್ನು ಸಲ್ಲಿಸಿದ್ದು, ಆದರೆ ಆ.ಸ.ನೌ ಬೇಗನೇ ಕ್ರಮ ತೆಗೆದುಕೊಂಡಿರುವುದಿಲ್ಲ ಅಂತಾ ಕಂಡುಬರುತ್ತದೆ. ಆ.ಸ.ನೌ ರವರು ಕ್ರಮ ತೆಗೆದುಕೊಂಡಿದ್ದೇ ಆದರೆ ಪಿ.ಡಬ್ಲ್ಯೂ.1 ಇವರಿಗೆ ಜಿಲ್ಲಾಧಿಕಾರಿಗಳು, ಚಾಮರಾಜನಗರ ಇವರಿಗೆ ಪತ್ರವನ್ನು ಬರೆಯುವುದು ಅವಶ್ಯಕತೆ ಇರಲಿಲ್ಲ ಅಂತಾ ಕಂಡುಬರುತ್ತದೆ.

20. ಅಲ್ಲದೇ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಛೇರಿ, ಚಾಮರಾಜನಗರ ಇವರು ದಿನಾಂಕ: 22/05/2017 ರಂದು ಆ.ಸ.ನೌ ರವರಿಗೆ ಬರೆದುಕೊಂಡ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.7 ಎಂದು ಗುರುತಿಸಲಾಗಿದೆ. ಸದರಿ ದಾಖಲೆಯಲ್ಲಿರುವ ವಿಷಯವನ್ನು ಪರಿಶೀಲಿಸಿದಾಗ, ದೂರುದಾರರು ದೂರನ್ನು ದಾಖಲಿಸಿದ್ದರೂ ಸಹಿತ ಕ್ರಮ ತೆಗೆದುಕೊಳ್ಳದೇ ಇದ್ದ ಬಗ್ಗೆ ಕಂಡು ಬರುತ್ತದೆ.

21. ಆ.ಸ.ನೌ ರವರ ಪ್ರಕಾರ ದೂರುದಾರರು ದೂರನ್ನು ಸಲ್ಲಿಸಿದ ತಕ್ಷಣ ಬೇಗನೆ ಕ್ರಮ ತೆಗೆದುಕೊಂಡು ಅತಿಕ್ರಮಣದಾರರ ಆಸ್ತಿಯಿಂದ ತೆರವುಗೊಳಿಸಿರುತ್ತಾರೆ ಅಂತಾ ನುಡಿದಿರುತ್ತಾರೆ. ಆದರೆ ಈ ಬಗ್ಗೆ ತಮ್ಮ ಸಾಕ್ಷಿಯಲ್ಲಿ ಯಾವ ದಿನಾಂಕದಂದು ಕ್ರಮ ತೆಗೆದುಕೊಳ್ಳಲಾಗಿದೆ ಅಂತಾ ತಿಳಿಸಿರುವುದಿಲ್ಲ. ಅಲ್ಲದೇ ಆ.ಸ.ನೌ ರವರು ಕಂದಾಯ ಅಧಿಕಾರಿಗಳ ಜೊತೆಗೆ ಸದರಿ

ನಿವೇಶನಕ್ಕೆ ಭೇಟಿ ಕೊಟ್ಟು ಯಾವ ದಿನಾಂಕದಂದು ತೆರವುಗೊಳಿಸಿರುತ್ತಾರೆ ಅಂತಾ ಹೇಳಿರುವುದಿಲ್ಲ.

22. ಆ.ಸ.ನೌ ರವರು ಜಿಲ್ಲಾಧಿಕಾರಿಗಳಿಗೆ ದಿನಾಂಕ: 26/04/2021 ರಂದು ಬರೆದುಕೊಂಡ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿ.ಡಿ.5 ಎಂದು ಗುರುತಿಸಲಾಗಿದೆ. ಇದನ್ನು ಪರಿಶೀಲಿಸಿದಾಗ ದೂರುದಾರರು ದಿನಾಂಕ: 24/06/2019 ರಂದು ದೂರನ್ನು ನಗರಸಭೆಗೆ ಸಲ್ಲಿಸಿರುತ್ತಾರೆ ಅಂತಾ ಹೇಳಿರುತ್ತಾರೆ. ಆದರೆ ನಿ.ಡಿ.5 ನಗರಸಭೆ ಕಾರ್ಯಾಲಯ ಇವರು ನೀಡಿದ ಹಿಂಬರಹವನ್ನು ನೋಡಿದಾಗ ದೂರುದಾರರು 28/09/2016 ರಲ್ಲಿಯ ದೂರನ್ನು ಸಲ್ಲಿಸಿರುತ್ತಾರೆ ಕಂಡುಬರುತ್ತದೆ. ಅದರಂತೆ ಜಿಲ್ಲಾಧಿಕಾರಿಗಳು ಆ.ಸ.ನೌ ರವರಿಗೆ ದಿನಾಂಕ: 22/05/2017 ರಂದು (ನಿ.ಪಿ.7) ರಲ್ಲಿ ಬರೆದುಕೊಂಡ ಪತ್ರವನ್ನು ಪರಿಶೀಲಿಸಿದಾಗ ದೂರುದಾರ 2016 ರಲ್ಲಿ ದೂರನ್ನು ಸಲ್ಲಿಸಿರುತ್ತಾರೆ ಅಂತಾ ಕಂಡುಬರುತ್ತದೆ. ಆ.ಸ.ನೌ ರವರು ದೂರುದಾರರು ದಿನಾಂಕ: 24/06/2019 ರಂದು ದೂರನ್ನು ಸಲ್ಲಿಸಿರುತ್ತಾರೆ ಎನ್ನುವ ಬಗ್ಗೆ ನಿ.ಡಿ.10ನ್ನು ಹಾಜರುಪಡಿಸಿರುತ್ತಾರೆ. ಈ ದಾಖಲೆಯನ್ನು ಪರಿಶೀಲಿಸಿದಾಗ ದೂರುದಾರರು ಆ.ಸ.ನೌ ರವರ 22/06/2019 ರಂದು ಇನ್ನೊಂದು ಪತ್ರ ಬರೆದಿರುವುದು ಕಂಡುಬರುತ್ತದೆ. ಏಕೆಂದರೆ ಸದರಿ ದೂರಿನಲ್ಲಿ ಜಿಲ್ಲಾಧಿಕಾರಿಗಳ ಪತ್ರದ ದಿನಾಂಕ: 22/05/2017 ರ ಉಲ್ಲೇಖವಿರುತ್ತದೆ. ಆದ್ದರಿಂದ ಮೊದನೆಯ ದೂರನ್ನು 2016 ರಲ್ಲಿ ಸಲ್ಲಿಸಿದರೂ ಕೂಡ 2019 ರವರೆಗೆ ಆ.ಸ.ನೌ ರವರು ಯಾವುದೇ ಕ್ರಮ ತೆಗೆದುಕೊಂಡಿವುದಿಲ್ಲ ಎಂದು ಸ್ಪಷ್ಟವಾಗಿ ಕಂಡುಬರುತ್ತದೆ.

23. ಆ.ಸ.ನೌ ರವರು ದೂರುದಾರರಿಗೆ ದಿನಾಂಕ: 16/07/2019 ರಂದು ಒಂದು ತಿಳಿವಳಿಕೆ ಪತ್ರವನ್ನ ನೀಡಿದ್ದು, ಅದರಲ್ಲಿ ಕಂದಾಯ ನಿರೀಕ್ಷಕರು ದಿನಾಂಕ: 16/07/2019 ರಂದು ಸ್ಥಳಕ್ಕೆ ಭೇಟಿ ನೀಡಿ ಆಸ್ತಿಯನ್ನು ತೆರವುಗೊಳಿಸಿರುತ್ತಾರೆ ಅಂತಾ ನಮೂದು ಇರುತ್ತದೆ. ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ಆ.ಸ.ನೌ ರವರು ಆಸ್ತಿಯನ್ನು ಅತಿಕ್ರಮಣದಾರರಿಂದ ತೆರವುಗೊಳಿಸಿದರೂ ಸಹಿತ ವಿಳಂಬ ನೀತಿಯನ್ನು ಅನುಸರಿಸಿರುತ್ತಾರೆ ಅಂತಾ ರುಜುವಾತುಪಡಿಸಿದ್ದು, ಆದ್ದರಿಂದ, ಅಂಶ–1ನ್ನು ಭಾಗಶಃ ಉತ್ತರಿಸಿರುತ್ತೇನೆ.

24.ಈ ಮೇಲ್ಕಂಡ ಕಾರಣಗಳು ಮತ್ತು ಚರ್ಚೆಯಿಂದಾಗಿ, ಆ.ಸ.ನೌ ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸುವಲ್ಲಿ ಭಾಗಶಃ ಸಫಲವಾಗಿರುತ್ತದೆ ಎನ್ನುವ ನಿರ್ಣಯಕ್ಕೆ ಬಂದು ಅಂಶ–1ನ್ನು ಭಾಗಶಃ ಸಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

25.**ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.**

## ನಿರ್ಣಯ

ಆ.ಸ.ನೌಕರ **ಶ್ರೀ. ಎಂ ರಾಜಣ್ಣ,** ಪೌರಾಯುಕ್ತರು (ಮೂಲತಃ ಸಮುದಾಯ ಸಂಘಟನಾಧಿಕಾರಿ) ನಗರಸಭೆ, ಚಾಮರಾಜನಗರ ಇವರ ವಿರುದ್ಧ ಆಪಾದಿಸಲಾದ ಆರೋಪಗಳು ಅಂದರೆ ಆ.ಸ.ನೌ ರವರು ಆಸ್ತಿ ನಂ.205/190 ರಲ್ಲಿದ್ದ ಗುಡಿಸಲನ್ನು ತೆರವುಗೊಳಿಸಿದರೂ ಸಹಿತ ವಿಳಂಬವಾಗಿ 3 ವರ್ಷದ ನಂತರ ತೆರವುಗೊಳಿಸಿದ್ದರಿಂದ, ಈ ಅಂಶವನ್ನು ರುಜುವಾತುಪಡಿಸಲು ಶಿಸ್ತುಪ್ರಾಧಿಕಾರವು ಭಾಗಶಃ ಸಫಲವಾಗಿರುತ್ತದೆ ಎಂದು ನಿರ್ಣಯಿಸಲಾಗಿದೆ.

**ಆ.ಸ.ನೌ ರವರ ನಿವೃತ್ತಿ ದಿನಾಂಕ: 31/07/2028 ಆಗಿರುತ್ತದೆ.**

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

Baradesi 15/10/22

**(ಸುದೇಶ್ ರಾಜಾರಾಮ್ ಪರದೇಶಿ)**
ಅಪರ ನಿಬಂಧಕರು ವಿಚಾರಣೆಗಳು–14,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

## ANNEXURES

<table>
<tr><th>Sl. No.</th><th colspan="2">Particulars of Documents</th></tr>
<tr><td>1</td><td colspan="2">Witness examined on behalf of the Disciplinary Authority</td></tr>
<tr><td></td><td>PW-1</td><td>Sri. Krishnaswamy S/o Late Chikkanna Shetty, Upparabeedi, Chamarajanagar.</td></tr>
<tr><td>2</td><td colspan="2">Documents marked on behalf of the Disciplinary Authority Ex.P-1 to Ex.P-10</td></tr>
<tr><td></td><td>Ex.P.1& 1(a)</td><td>Complaint given to this institution dtd: 22/06/2017 with signature.</td></tr>
<tr><td></td><td>Ex.P.2& 2(a)</td><td>Form No.1 with signature.</td></tr>
<tr><td></td><td>Ex.P.3& 3(a)</td><td>Form No.2 with signature (Affidavit).</td></tr>
<tr><td></td><td>Ex.P.4</td><td>Letter dtd: 04/05/2017 submitted to DC, Chamarajanagar.</td></tr>
<tr><td></td><td>Ex.P.5</td><td>Acknowledgement.</td></tr>
<tr><td></td><td>Ex.P.6</td><td>Property tax register.</td></tr>
<tr><td></td><td>Ex.P.7</td><td>Letter dtd: 22/05/2017 addressed by Project Director, DUDA, Chamarajangar.</td></tr>
<tr><td>3</td><td colspan="2">Witness examined on behalf of the DGO, Documents marked on behalf of the DGO</td></tr>
<tr><td></td><td>DW-1</td><td>Sri. M Rajanna S/o C Mahadevappa, Municipal Commissioner, CMC, Nanjangudu, Mysuru.</td></tr>
<tr><td>4</td><td colspan="2">Documents marked on behalf of the DGOs through the complainant</td></tr>
<tr><td></td><td>Ex.D.1</td><td>Property tax register.</td></tr>
<tr><td></td><td>Ex.D.2</td><td>Photographs.</td></tr>
<tr><td></td><td>Ex.D.3</td><td>Sketch map.</td></tr>
</table>

&

| | | |
|---|---|---|
| | **Ex.D.4** | Property Tax Register. |
| | **Ex.D.5** | Letter dtd: 26/04/2021 submitted to Project Director, DUDA, Chamarajangar. |
| | **Ex.D.6** | Letter dtd: 05/10/2020 submitted by Municipal Commissioner, CMC, Chamarajanagar. |
| | **Ex.D.7** | O.M dtd: 02/07/2018 issued by DC, Chamarajanagar. |
| | **Ex.D.8** | O.M dtd: 20/06/2018 issued by DC, Chamarajanagar. |
| | **Ex.D.9** | O.M dtd: 29/11/2017 issued by DC, Chamarajanagar. |
| | **Ex.D.10** | Letter dtd: 22/06/2019 submitted by complainant. |
| | **Ex.D.11** | Letter dtd: 16/07/2019 issued to complainant. |

Dated this the 15th October, 2022

(signature) 15/10/22

**(SUDESH RAJARAM PARADESHI)**
Additional Registrar Enquiries-14,
Karnataka Lokayukta,
Bangalore.